ಅಧ್ಯಕ್ಷರು —ಮಾನ್ಯ ಪಂಪಾಪತಿಯವರೇ, ತಾವು ಹಿರಿಯ ಸದಸ್ಯರು. ಇದರ ಬಗ್ಗೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಿ. ಅಥವಾ ಸಂಬಂಧಪಟ್ಟ ಸಚಿವರ ಚೇಂಬರ್‌ಗೆ ಹೋಗಿ ಚರ್ಚೆ ಮಾಡಿ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಂಪಾಪತಿ.—ಅವರು ಉತ್ತರ ಹೇಳುವುದಕ್ಕೆ ತಯಾರಾಗಿದ್ದಾರೆ ಸ್ವಾಮಿ.

ಅಧ್ಯಕ್ಷರು,—ನಾನು ಉಪ ಪ್ರಶ್ನೆ ಕೇಳಿ ಎಂದು ಅವಕಾಶ ಕೊಟ್ಟರೆ, ನೀವು ಆದರ ದುರುಪಯೋಗ ಮಾಡಿಕೊಳ್ಳುತ್ತೀರಿ.

ಶ್ರೀ ಪಂಪಾಪತಿ.—ಅವರು ಹೇಳುವುದಕ್ಕೆ ತಯಾರಾಗಿದ್ದಾರೆ.

ಅಧ್ಯಕ್ಷರು.—ನೀವು ಈ ರೀತಿ ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ನಿಮಗೆ ಕ್ರೀಡಾಂಗಣ ಬೇಕಾಲ್ಲವೇ, ಕೆಲಸ ಮಾಡಿಸಿಕೊಡೋಣ, ದಯವಿಟ್ಟು ಕುಳಿತುಕೊಳ್ಳಿ. ಶ್ರೀ ಜ್ಞಾನದೇವ ದೊಡ್ಡಮೇಟಿಯವರು ಪ್ರಶ್ನೆ ಕೇಳಬಹುದು.

ರಾಜ್ಯದಲ್ಲಿರುವ ಸಮುದಾಯ ಆರೋಗ್ಯ ಮಾರ್ಗದರ್ಶಿಗಳು

೬೧ ಶ್ರೀ ಜೆ.ಎಸ್. ದೊಡ್ಡಮೇಟಿ (ರೋಣ).—ಮಾನ್ಯ ಆರೋಗ್ಯ ಮಂತ್ರಿಗಳು ದಯವಿಟ್ಟು ಕೆಳಗಿನ ವಿಷಯಗಳನ್ನು ತಿಳಿಸುವರೇ ?

(ಅ) ರಾಜ್ಯದ ಹಳ್ಳಿಗಳಲ್ಲಿ ಕೆಲಸ ಮಾಡುತ್ತಿರುವ ಸಮುದಾಯ ಆರೋಗ್ಯ ಮಾರ್ಗದರ್ಶಕರ ಸಂಖ್ಯೆಯೆಷ್ಟು ? ಸರ್ಕಾರವು ಅವರ ಸೇವೆಯನ್ನು ಮುಂದುವರಿಸುವುದೆ ?

(ಆ) ಹಾಗಿದ್ದರೆ, ಈ ಸಮುದಾಯ ಆರೋಗ್ಯ ಮಾರ್ಗದರ್ಶಕರನ್ನು ಕರ್ನಾಟಕ ರಾಜ್ಯ ಸೇವಾ ನಿಯಮಗಳ ವ್ಯಾಪ್ತಿಗೆ ತರಲು ಸರ್ಕಾರದ ಮುಂದೆ ಸೂಚನೆಯೇನಾದರೂ ಇದೆಯೇ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

(ಅ) ೧೪,೬೭೩ ಕೇಂದ್ರ ನೆರವಿನ ಈ ಯೋಜನೆಯಲ್ಲಿ ಅವರ ಸೇವೆಯನ್ನು ೭ನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಮುಂದುವರೆಸುವ ಸಂಭವವಿದೆ.

(ಆ) ಇಲ್ಲ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ರಾಜ್ಯ ಸರಕಾರ ಏನಾದರೂ ಇದಕ್ಕೆ ನೆರವು ನೀಡುತ್ತಿದೆಯೇ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಇದಕ್ಕೆ ಸಂಪೂರ್ಣವಾಗಿ ನೂರಕ್ಕೆ ಭಾಗ ಕೇಂದ್ರ ಸರಕಾರದ ನೆರವು ಇದೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಮಾರ್ಗದರ್ಶಿಗಳಿಗೆ ಕೊಡುವ ಮಾಸಿಕ ಸಂಭಾವನೆ ಎಷ್ಟು ?

ಡಾ. ಹೆಚ್. ಎಲ್. ತಿಮ್ಮೇಗೌಡ.—ಇವರು ಸ್ವಯಂ ಸೇವಕರಾಗಿದ್ದಾರೆ. ಆದುದರಿಂದ ಇವರಿಗೆ ಸಂಭಾವನೆ ಇಲ್ಲ. ಇವರಿಗೆ ಖರ್ಚಿಗೋಸ್ಕರ ತಿಂಗಳಿಗೆ ೫೦ ರೂಪಾಯಿ ಗೌರವಧನ ಮತ್ತು ಔಷಧಿಗಾಗಿ ಮೂರುತಿಂಗಳಿಗೆ ಒಂದು ಸಲ ೧೫೦ ರೂಪಾಯಿಗಳನ್ನು ಕೊಡುತ್ತಿದ್ದೇವೆ.

ಸಚ್ಚೇರಿ ಪೇಟೆಯಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕಕ್ಕೆ ವೈದ್ಯರ ನೇಮಕಾತಿ.

೭(೧೫೨) ಶ್ರೀ ವಿ ವಸಂತ ವಿ. ಸಾಲಿಯನ್ (ಕಾಪು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾಪು ಕ್ಷೇತ್ರದ ಸಚ್ಚೇರಿ ಪೇಟೆಯ ಪ್ರಾಥಮಿಕ ಆರೋಗ್ಯ ಘಟಕಕ್ಕೆ ವೈದ್ಯರನ್ನು ನೇಮಕ ಮಾಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸದರಿ ಘಟಕಕ್ಕೆ ಯಾವಾಗ ವೈದ್ಯರನ್ನು ನೇಮಕ ಮಾಡಲಾಗುವುದು?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಬಂದಿದೆ.

ಆ) ಆದಷ್ಟು ಜಾಗ್ರತೆ ನೇಮಕ ಮಾಡಲಾಗುವುದು.

ಶ್ರೀ ವಸಂತ ವಿ. ಸಾಲಿಯಾನ್.—ಮಾನ್ಯ ಅಧ್ಯಕ್ಷರೇ, ೧೯೮೩ನೇ ಇಸವಿಯಲ್ಲಿ ಸಹ ಮಾನ್ಯ ಸಚಿವರು ನನಗೆ ಇದೇ ರೀತಿ ಉತ್ತರ ಕೊಟ್ಟಿದ್ದರು. ಆದರೆ ಅದು ಇನ್ನೂ ಆಗಿಲ್ಲ. ಸಚ್ಚೇರಿ ಪೇಟೆಯು ಬಹಳ ಹಿಂದುಳಿದ ಗ್ರಾಮಾಣ ಪ್ರದೇಶ ಆಗಿದ್ದು, ಅಲ್ಲಿ ಹರಿಜನರ ಕಾಲೋನಿಗಳು ಇದರೂ, ಡಾಕ್ಟರ್ ಇಲ್ಲದಿರುವ ಕಾರಣ, ರೋಗಿಗಳು ಮಂಗಳೂರಿಗೆ ಹೋಗುವ ಪರಿಸ್ಥಿತಿ ಇದೆ. ಅದುದರಿಂದ ಆದಷ್ಟು ಬೇಗ ಇಲ್ಲಿಗೆ ಡಾಕ್ಟರನ್ನು ನೇಮಕ ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ. ಇಲ್ಲ, "ಹೌದು" ಎಂದು ಉತ್ತರ ಕೊಡುವ ಅಗತ್ಯ ಇಲ್ಲ. ಮಾನ್ಯ ಮಂತ್ರಿಯವರು ಯಾವಾಗ ಇಲ್ಲಿಗೆ ವೈದ್ಯರನ್ನು ನೇಮಕ ಮಾಡುತ್ತಾರೆ ಎಂಬುದನ್ನು ನಿರ್ದಿಷ್ಟವಾಗಿ ನನಗೆ ಹೇಳಬೇಕಾಗಿದೆ. ನಾನು ೧೯೮೩ನೇ ಇಸವಿಯಲ್ಲಿ ಇದೇ ರೀತಿ ಪ್ರಶ್ನೆ ಕೇಳಿದ್ದೆ, ಆಗಲೂ ಅದಷ್ಟು ಬೇಗ ನೇಮಕ ಮಾಡುತ್ತೇವೆಂದು ಹೇಳಿದ್ದರು. ಇದರ ಬಗ್ಗೆ ನಿರ್ದಿಷ್ಟವಾಗಿ ನನಗೆ ಉತ್ತರ ಹೇಳಬೇಕೆಂದು ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತೇನೆ.

ಡಾ॥ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೇ, ಈ ಆಸ್ಪತ್ರೆ ತಾಲ್ಲೂಕ್ ಬೋರ್ಡ್‌ನಿಂದ ನಮಗೆ ಬಂದಿದೆ, ಇದು ಮೂರನೇ ದರ್ಜೆ ಆಸ್ಪತ್ರೆ. ಈ ಆಸ್ಪತೆಯಲ್ಲಿರತಕ್ಕ ನೌಕರರ ಸೇವೆಯನ್ನು ಮುಂದುವರಿಸುವುದಕ್ಕೆ, ಮತ್ತು ರೆಗ್ಯುಲರೈಸ್ ಮಾಡುವುದಕ್ಕೆ ಮಂತ್ರಿ ಮಂಡಲದಲ್ಲಿ ತೀರ್ಮಾನ ಮಾಡಿದ್ದೇವೆ. ಇದು ಮೂರನೇ ದರ್ಜೆ ಆಸ್ಪತ್ರೆಯಾಗಿರುವುದರಿಂದ, ಇನ್ನೊಬ್ಬ ಡಾಕ್ಟರನ್ನು ಹಾಕಬೇಕಾದರೆ, ಅದೇ ದರ್ಜೆಯ ಡಾಕ್ಟರನ್ನು ಹುಡುಕಿ ಹಾಕಬೇಕಾಗುತ್ತದೆ. ಅಂತಹ ವೈದ್ಯರ ಸಂಖ್ಯೆ ಬಹಳ ಕಡಿಮೆ ಇದೆ. ಅದಷ್ಟು ಬಾಗ್ಗಿತೆ ಅವರನ್ನು ಹಾಕಿತ್ತೇವೆ.

ಮೈಸೂರು ನಗರದಲ್ಲಿ ಕ್ರೀಡಾಂಗಣ ನಿರ್ಮಿಸುವುದು.

೮ (೦೩೪) ಶ್ರೀಮತಿ ಮುಕ್ತರ್ ಉನ್ನೀಸ (ನರಸಿಂಹರಾಜ).—ಮಾನ್ಯ ವಾರ್ತಾ ಯುವಜನ ಕ್ರೀಡೆ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

೧. ಮೈಸೂರು ನಗರದಲ್ಲಿ ನಿರ್ಮಾಣವಾಗಬೇಕಿರುವ ಕ್ರೀಡಾಂಗಣ ನಿರ್ಮಾಣ ಕಾರ್ಯದ ಬಗ್ಗೆ ತೆಗೆದುಕೊಂಡಿರುವ ಹಣವೆಷ್ಟು?

೨. ೧೯೮೫ರ ದಸರ ಹೊತ್ತಿಗೆ ಕ್ರೀಡಾಂಗಣ ಕಾರ್ಯ ಪೂರ್ಣಗೊಳ್ಳುತ್ತದೆಯೇ?

೩. ಹಾಗಿಲ್ಲದಿದ್ದಲ್ಲಿ ಯಾವಾಗ ಪೂರ್ಣಗೊಳ್ಳುತ್ತದೆ.

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು).—

೧. ನಿರ್ಮಾಣ ಕಾರ್ಯ ನಡೆಯುತ್ತಿದೆ. ಇದುವರೆವಿಗೂ ರೂ. ೨೧.೦೫,೪೯೨ ಖರ್ಚಾಗಿದೆ.

೨. ಇಲ್ಲ.

೩. ಸಿವಿಲ್ ಕಾಮಗಾರಿಗಳು ಗಣನೀಯವಾಗಿರುವುದರಿಂದ ಕ್ರೀಡಾಂಗಣ ಕೆಲಸ ಮುಗಿಯಲು ಇನ್ನೂ ಕೆಲಕಾಲ ಬೇಕಾಗುತ್ತದೆ.

SMT. MUKHTARUNNILA.—Who is responsible for the delay?

ಡಾ॥ ಜೀವರಾಜಆಳ್ವ.—ಸ್ವಾಮಿ, ಮೈಸೂರು ಕ್ರೀಡಾಂಗಣದ ಮೂಲ ಅಂದಾಜು ೩೫ ಲಕ್ಷ ಆಗಿದ್ದು, ನಂತರ ಈ ಅಂದಾಜು ೫೨ ಲಕ್ಷ ಆಗಿದೆ. ಮೊದಲೇ ಹೇಳಿದ ಹಾಗೆ ಸುಮಾರು ೨೧ ಲಕ್ಷ ಖರ್ಚು ಮಾಡಿದ್ದೇವೆ. ನೊನ್ನೆತಾನೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕರಿಂದ ೨೫ ಲಕ್ಷ ರೂಪಾಯಿ ಸೇರಿಸಿದ್ದೇವೆ. ಜೊತೆಗೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಹಾಗೆ, ಈ ಆಂತರಾಷ್ಟ್ರೀಯ ಯುವ ಸಂವತ್ಸರದಲ್ಲಿ ಈ ಕಾರ್ಯ ಮುಗಿಸಬೇಕೆಂದು ಮನಸ್ಸು ಮಾಡಿದ್ದೇವೆ.

SMT. MUKHTARUNNISSA.—Will not the costs of the essential materials like cement, steel etc., go up if you delay like this? Don't you think that Stadium is necessary for Mysore which is an educa-